

ಜಪಾನಿನ ಓಮೊರಿಯಲ್ಲಿ ಥರಾವರಿ ಭತ್ತದ ತಳಿಗಳೊಂದಿಗೆ ಮೂಡಿಸಲಾದ 'ಹಿಮೊ ಕನ್ನಾನ್ ಅಂಡ್ ಅಕಾಲಾ'

# ಭತ್ತದ ಕಲೆ!

## ಗದ್ದೆಯೇ ಕ್ಯಾನ್ವಾಸ್, ಪೈರೇ ಗೆರೆ–ಬಣ್ಣ

**ಭತ್ತದ ಗದ್ದೆಯನ್ನೇ ಕ್ಯಾನ್ವಾಸ್ ಮಾಡಿಕೊಂಡು, ಅದರ ಭಿನ್ನ ತಳಿಗಳನ್ನೇ ಬಣ್ಣಗಳಾಗಿಸಿಕೊಂಡು ಒಡಮೂಡಿಸುವ ಈ 'ಭತ್ತದ ಕಲೆ'ಯ ಹಿಂದೆ ಪುಟ್ಟ ಇತಿಹಾಸವೇ ಅಡಗಿದೆ.**

■ ಸುಮಲತಾ ಎನ್.

ರಾಯಚೂರಿನ ಗದ್ದೆಯೊಂದರಲ್ಲಿ ಭತ್ತದ ಪೈರಿನಿಂದ ಮೂಡಿಸಲಾದ ನಟ ಪುನೀತ್ ರಾಜಕುಮಾರ್ ಅವರ ಚಿತ್ರವೊಂದು ರಾಜ್ಯಾದ್ಯಂತ ಈಚೆಗೆ ಗಮನ ಸೆಳೆದಿತ್ತು. ಭತ್ತದ ಕಲೆಯಲ್ಲಿ ಅರಳಿದ ಪುನೀತ್ ನಗುವಿಗೂ, ಕೃಷಿಕ ಸತ್ಯನಾರಾಯಣ ಕರ್ರಿ ಅವರ ಅಭಿಮಾನಕ್ಕೂ ಮೆಚ್ಚುಗೆಯ ಹೊಳೆಯೇ ಹರಿದುಬಂದಿತ್ತು. ಹೊಸತನದ ಈ ಕಲೆ, ನೋಡಿದವರ ಕಣ್ಣರಳುವಂತೆ ಮಾಡಿತ್ತು. ಅಂದಹಾಗೆ, ಏನಿದು 'ಭತ್ತದ ಕಲೆ'?.

'ಭತ್ತದ ಕಲೆ'ಯ (Rice Paddy Art) ಮೂಲ ಇರುವುದು ಜಪಾನ್ ದೇಶದಲ್ಲಿ. 'ಟ್ಯಾಂಬೊ ಆರ್ಟ್' ಎಂದೇ ಇದು ಪ್ರಸಿದ್ಧಿ. ಜಪಾನೀ ಭಾಷೆಯಲ್ಲಿ 'ಟ್ಯಾಂಬೊ' ಎಂದರೆ ಭತ್ತದ ಗದ್ದೆ. ಭತ್ತದ ಗದ್ದೆಯಲ್ಲಿ, ಬಗೆಬಗೆ ತಳಿಗಳ ಭತ್ತದ ಪೈರಿನ ಮುಖಾಂತರ ಅರಳಿಸುವ ಚಿತ್ತಾರವನ್ನು 'ಟ್ಯಾಂಬೊ ಆರ್ಟ್' ಎಂದು ಕರೆದಿದ್ದಾರೆ ಜಪಾನೀಯರು. ಭತ್ತದ ಕಲೆ ಹುಟ್ಟಿಕೊಂಡ ಬಗೆಯ ಕುರಿತು ಪುಟ್ಟ ಇತಿಹಾಸವೇ ಇದೆ.

1993ರಲ್ಲಿ, ಜಪಾನಿನ ಓಮೊರಿಯಲ್ಲಿನ ಇನಕಾದಾಟೆ ಎಂಬ ಹಳ್ಳಿಯಲ್ಲಿ ಜನರು ತಮ್ಮ ಗ್ರಾಮವನ್ನು ಪುನರುಜ್ಜೀವನಗೊಳಿಸಲು ಹೊಸ ಮಾರ್ಗದ ಹುಡುಕಾಟದಲ್ಲಿದ್ದರು. ಇದಕ್ಕಾಗಿ ತಮ್ಮ ಗ್ರಾಮದ ಇತಿಹಾಸ ಕೆದಕಿದ ಅವರಿಗೆ, ಎರಡು ಸಾವಿರ ವರ್ಷಗಳಿಗೂ ಹೆಚ್ಚು ಕಾಲದಿಂದ ತಮ್ಮ ಹಳ್ಳಿಯಲ್ಲಿ ಭತ್ತವನ್ನು ಬೆಳೆಯಲಾಗುತ್ತಿದೆ ಎಂಬ ಅಂಶ ಅಚ್ಚರಿ ಮೂಡಿಸಿತ್ತು. ಈ ಅಪೂರ್ವ ಇತಿಹಾಸವನ್ನೇ ತಮ್ಮ ಗ್ರಾಮದ ಹೆಗ್ಗುರುತನ್ನಾಗಿ ಮಾಡಲು, ಆ ಪ್ರಯತ್ನವನ್ನು ಗೌರವಪೂರ್ವಕವಾಗಿ ದಾಖಲಿಸಲು ಹೊರಟ ಅವರು ಭತ್ತದ ಕಲೆಗೆ ನಾಂದಿ ಹಾಡಿದರು.

ನೈಜ ಕಲೆಯನ್ನು ಮೂಡಿಸುವ ಹೊಸ ಪ್ರಯತ್ನದೊಂದಿಗೆ ಭತ್ತದ ಗದ್ದೆಯನ್ನೇ ಕ್ಯಾನ್ವಾಸ್‌ನಂತೆ ಮಾಡಿಕೊಂಡರು. ವಿವಿಧ ಭತ್ತದ ತಳಿಗಳೇ ಬಣ್ಣಗಳಾದವು. ಮೊದಲ ಬಾರಿಗೆ ನಾಲ್ಕು ವಿಧದ ಭತ್ತದ ತಳಿಗಳನ್ನು ಬಳಸಿ ಓಮೊರಿಯದ ಅಸ್ಮಿತೆಯೇ ಆಗಿದ್ದ



ಥೈವಾನ್‌ನ ಭತ್ತದ ಗದ್ದೆಯೊಂದರಲ್ಲಿ ಒಡಮೂಡಿದ ಗುವಾನ್ಯಿನ್ ದೇವತೆ